ಅ. ಸರ್ಕಾರವು ಇಂತಹ ಬಸ್ಸುಗಳನ್ನು ನಿಯಮಾನುಗೊಳಿಸುವುದಾಗಲಿ ಅಥವಾ ಖಾಸಗೀಕರಣಗೊಳಿಸುವುದಾಗಲಿ ಮಾಡುವುದೆ;

ಇ. ಈ ಖಾಸಗಿ ಬಸ್ಸುಗಳನ್ನು ಓಡಿಸುವುದರಿಂದ ಅಂದಾಜು ಕಂದಾಯ ಹಣ ಎಷ್ಟು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ದೂರ ಅಂತರ ಕ್ರಮಿಸುವ 380 ಟೂರಿಸ್ಟ್ ಖಾಸಗಿ ಬಸ್ಸುಗಳ ಪರವಾನಿಗೆ ಹೊಂದಿ ಬೇರೆ ಬೇರೆ ಸ್ಥಳಗಳಿಂದ ದಿನಾಂಕ 28–2–93ರ ಅಂತ್ಯದವರೆಗೆ ಓಡಾಡುತ್ತವೆ.

ಆ. ಇಲ್ಲ.

ಇ. ಉದ್ಭವಿಸುವುದಿಲ್ಲ.

ಗುಲ್ಬರ್ಗಾ–ಗುರುಮಿಟಕಲ್‌ವರೆಗೆ ಓಡಿಸುವ ಬಸ್ಸುಗಳ ಸಂಖ್ಯೆ

1255 (1929): ಶ್ರೀ ಶಿವಶೇಖರಪ್ಪಗೌಡ ಶಿರವಾಳ, (ಶಹಾಪುರ):–

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಗುಲ್ಬರ್ಗಾದಿಂದ ಗುರುಮಿಟಕಲ್‌ವರೆಗೆ ಎಷ್ಟು ಎಕ್ಸ್‌ಪ್ರೆಸ್ ಬಸ್ಸುಗಳನ್ನು ಓಡಿಸುತ್ತಿದ್ದಾರೆ;

ಆ. ಸಾಕಷ್ಟು ಬಸ್ಸುಗಳಿಲ್ಲದೇ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರಿಗೆ ಗೊತ್ತಿದೆಯೇ;

ಇ. ಆ ಭಾಗದ ಜನರ ಅನುಕೂಲಕ್ಕಾಗಿ ಇನ್ನೊಂದು ಹೆಚ್ಚಿನ ಎಕ್ಸ್‌ಪ್ರೆಸ್ ಬಸ್ಸು ಓಡಿಸಲಾಗುವುದೇ;

ಈ. ಗುಲ್ಬರ್ಗಾದಿಂದ ಸಂಜೆ 6.00ಗಂಟೆಗೆ ಹೊರಟು ಗುರುಮಿಟಕಲ್ ತಲುಪಿ ನಂತರ ಮುಂಜಾನೆ 6.00ಗಂಟೆಗೆ ಗುರುಮಿಟಕಲ್ ಬಿಟ್ಟು ಗುಲ್ಬರ್ಗಾ ತಲುಪುವಂತೆ ಎಕ್ಸ್‌ಪ್ರೆಸ್ ಬಸ್ ಓಡಿಸುವ ಮೂಲಕ ಜನರಿಗೆ ಅನುಕೂಲ ಮಾಡಿಕೊಡಲಾಗುವುದೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಎರಡು.

ಆ. ಇಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಗುಲ್ಬರ್ಗದಿಂದ ಗುರುಮಿಟಕಲ್‌ಗೆ ಒಂದು ವೇಗದೂತ ಬಸ್ಸನ್ನು ಓಡಿಸುತ್ತಿದ್ದು ಅದು ಗುಲ್ಬರ್ಗದಿಂದ ಸಂಜೆ 5.45 ಗಂಟೆಗೆ ಹಾಗೂ ಗುರುಮಿಟಕಲ್‌ನಿಂದ ಬೆಳಿಗ್ಗೆ 6.45ಗಂಟೆಗೆ ಹೊರಡುತ್ತಿದೆ. ಆದ್ದರಿಂದ ಗುಲ್ಬರ್ಗದಿಂದ ಸಂಜೆ 6.00 ಗಂಟೆಗೆ ಮತ್ತು ಗುರುಮಿಟಕಲ್‌ನಿಂದ ಬೆಳಿಗ್ಗೆ 6.00ಗಂಟೆಗೆ ಹೊರಡುವಂತೆ ಮತ್ತೊಂದು ವೇಗದೂತ ಬಸ್ಸು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.